# Narmada Jhabua Gramin Bank, Indore

आपका अपना बैंक

(A Joint Venture of Govt. of India, M.P. Govt. & Bank of India)

**Education Loan**



**Home Loan**



**Retail Trade Loan**



**Personal Loan**



**KCC Loan Facility**



**Locker Facility**



**More than 355 Fully Computerised Branches**

**Winner of Inclusive Finance India Award for year 2014**

## Deposit Schemes of Our Bank

- Current Deposit
- Saving Deposit
- FDR/DBD ( Quarterly compunding interest)
- Recurring / Flexi Recurring
- Monthly/Quarterly Income Deposit (MIC/QIC)
- Sunidhi Deposit scheme (Tax Saving Deposit Scheme) etc.

## Loan Schemes of Our Bank

- Home Loan
- Mortgage Loan
- Business Loan – (with CC/OD Limit)
- Education Loan
- Micro Finance
- Vehicle & SRTO Loan
- Personal Loan
- Consumer Loan
- SHG, JLG, SCC, GCC, ACC, WCC etc..

**Kollegal V. Raghavendra**
Chairman & CEO

Head Office : Arcade Silver, Near Chappan Shop, New Palasia, Indore (M.P.) 452 001
☎ : (0731) 2549053-56, Fax : (0731) 2432432 • Website : www.njgb.in • Email : njgbhoindore@yahoo.com

ಸಂಪಾದಕೀಯ

# ಧರ್ಮ ಮತ್ತು ಶ್ರದ್ಧೆ

**ಮ**ತ, ಧರ್ಮ ಎಂದ ಕೂಡಲೆ ಕೋಮು ಗಲಭೆಯ, ಗೊಂದಲದ, ರಕ್ತಪಾತದ ಚಿತ್ರ ಕಣ್ಣಮುಂದೆ ಬಂದು ನಿಲ್ಲುತ್ತದೆ. ಇತ್ತೀಚೆಗೆ ಅನಾಚಾರ, ಯುದ್ಧ, ಉಗ್ರವಾದಿಗಳ ತನಕವೂ ಅದು ಮುಂದುವರೆದಿದೆ. ಶಾಂತಿ, ನೆಮ್ಮದಿ, ಸಂಸ್ಕೃತಿ, ಸಮನ್ವಯ, ಉದಾತ್ತತೆಗಳನ್ನು ಪ್ರತಿಪಾದಿಸಬೇಕಾಗಿದ್ದ ಮತ, ಧರ್ಮಗಳ ವ್ಯಾಖ್ಯೆ ದಿಕ್ಕು ತಪ್ಪುತ್ತಿದೆಯೆ? ಧರ್ಮದ ನಿಜವಾದ ಅರ್ಥವೇನು? ಸಾಮಾಜಿಕ, ರಾಜಕೀಯ ಸನ್ನಿವೇಶಗಳಲ್ಲಿ ಅದು ಪಡೆದುಕೊಳ್ಳುತ್ತಿರುವ ಬಣ್ಣ ಯಾವುದು? ಈ ದಿಕ್ಕಿನಲ್ಲಿ ಯೋಚಿಸುವಾಗ ಕೆಲವು ಸೂಕ್ಷ್ಮ ಅಂಶಗಳನ್ನು ನಾವು ಗಮನಕ್ಕೆ ತಂದುಕೊಳ್ಳಬೇಕು.

### ೧. ಧರ್ಮ ಕಂಡುಬರುವ ರೀತಿ

ಮತ, ಧರ್ಮಗಳಿಲ್ಲದ ಮಾನವ ಜೀವನವನ್ನು ನಾವು ಕಲ್ಪಿಸಿಕೊಂಡರೆ, ಯಾವುದೇ ಸಮಸ್ಯೆ ಅಥವಾ ಸಂಘರ್ಷವಿಲ್ಲದ ಒಂದು ಸುಂದರ ಸಮಾಜ ಸೃಷ್ಟಿಯಾಗುತ್ತದೆ ಎಂಬುದು ಅರ್ಥವಿಲ್ಲದ ಮಾತು. ನಾಸ್ತಿಕವಾದ ಅಥವಾ ಧರ್ಮವಿರೋಧಿ ವಿಚಾರಧಾರೆಗಳು ಪ್ರತಿಪಾದಿಸುವ ಈ ಸಮಾಜ ಚಾರಿತ್ರಿಕವಾಗಿ ಒಂದು ಮಿಥ್ಯೆ. ಆದಿಮ ಜನಾಂಗದಿಂದ ಹಿಡಿದು, ಹಲವು ಶತಮಾನಗಳ ಸಾಂಸ್ಕೃತಿಕ ವೈಜ್ಞಾನಿಕ ಆವಿಷ್ಕಾರಗಳ ಮೂಲಕ ಸಾಗಿಬಂದ ಮಾನವ ಇತಿಹಾಸದಲ್ಲಿ ಧಾರ್ಮಿಕ, ಆಧ್ಯಾತ್ಮಿಕ ಭಾವನೆಗಳು ಎಲ್ಲ ಕಾಲದಲ್ಲೂ ಇದ್ದದನ್ನು ನಾವು ಕಾಣುತ್ತೇವೆ. ಹಲವು ಅಂಧಶ್ರದ್ಧೆ, ಸಾಂಪ್ರದಾಯಿಕ ನಂಬಿಕೆಗಳನ್ನೆಲ್ಲ ಬುಡಮೇಲು ಮಾಡಿದ ವೈಜ್ಞಾನಿಕ ಬೆಳವಣಿಗೆಯ ಪ್ರಖರ ಹೊಡೆತಗಳನ್ನೂ ಎದುರಿಸಿ ನಿಂತಿದೆ ಧಾರ್ಮಿಕ ಭಾವನೆ. ಮತ, ಧರ್ಮಗಳು ಅಡಿಪಾಯವಿಲ್ಲದ ಕಟ್ಟಡವಾಗಿದ್ದರೆ, ೧೮–೧೯ ನೇ ಶತಮಾನದ ವೈಜ್ಞಾನಿಕ ಕ್ರಾಂತಿಯನ್ನು ಎದುರಿಸಿ ನಿಲ್ಲದೆ, ಕುಸಿದು ಭೂಗತವಾಗಿ ಬಿಡುತ್ತಿದ್ದವು. ಆದರೆ ಇಂದು ನಾವು ಕಾಣುವುದೇನನ್ನು? ಮತಾಂಧತೆಯ ತೀವ್ರತರ ಸಂಘರ್ಷವನ್ನು ಹಲವು ದೇಶಗಳಲ್ಲಿ, ಹಲವು ನೆಲೆಗಳಲ್ಲಿ ಕಾಣುತ್ತಿದ್ದೇವೆ. ನೇರವಾಗಿಯೋ, ಪರೋಕ್ಷವಾಗಿಯೋ ಒಂದು ದೇಶದ, ಒಂದು ಜನಾಂಗದ ಗೊತ್ತುಗುರಿಯನ್ನು ನಿರ್ಣಯಿಸುವಲ್ಲಿ ಮತ, ಧರ್ಮಗಳು ಪ್ರಮುಖ ಪಾತ್ರ ವಹಿಸುತ್ತಿವೆ. ಯಾರೂ ಸಮರ್ಥಿಸಲಾಗದ ಭಯೋತ್ಪಾದಕ ಆಕ್ರಮಣ, ನೂರಾರು ಜನರ ಬರ್ಬರ ಹತ್ಯೆ, ಉಗ್ರವಾದೀ ಸಂಘಟನೆಗಳ ಪ್ರಚೋದನೆ, ಹಿಂಸಾಚಾರವನ್ನು ಪ್ರೇರೇಪಿಸುವ ವಿಕೃತ ಪಿತೂರಿಗಳನ್ನು ಯಾವ ಧರ್ಮದಲ್ಲಿ ಪ್ರತಿಪಾದಿಸಲಾಗಿದೆ? ಯಾವ ಧರ್ಮದ, ಮತದ ತತ್ತ್ವಗಳು ಇಂಥ ಘಟನೆಗಳನ್ನು ಎತ್ತಿ ಹಿಡಿಯುತ್ತವೆ? ಯಾವ ಧರ್ಮದ ಸಂತರು ಈ ಬಗೆಯ ಕೃತ್ಯಗಳಿಗೆ ಪ್ರೇರಣೆ ನೀಡುತ್ತಾರೆ?

ಮತಧರ್ಮಗಳನ್ನು ಕುರಿತು ಅಧ್ಯಯನ ಮಾಡಿದರೆ, ಎಲ್ಲೂ ಇವುಗಳಿಗೆ ಸಮರ್ಥನೆ ನೀಡಿರುವುದು ಕಂಡುಬರುವುದಿಲ್ಲ. ಆದ್ದರಿಂದ, ಈ ಬಗೆಯ ಅನಾಚಾರಗಳಿಗೆ ಮೂಲ ಇನ್ನೆಲ್ಲೋ ಇದೆಯೆನ್ನಬೇಕು.

### ೨. ಧರ್ಮಶ್ರದ್ಧೆ ಹಾಗೂ ಮತಾಂಧತೆ

ಈ ಎರಡು ಪದಗಳನ್ನು ಸಕಾರತ್ಮಕಾಗಿಯೂ, ನಕಾರಾತ್ಮಕವಾಗಿಯೂ ಬಳಸುತ್ತೇವೆ. ಆದರೆ ಇವೆರಡರ ವ್ಯತ್ಯಾಸವನ್ನು ಗುರುತಿಸುತ್ತಾ ಹೋದಾಗ, ಈ ವ್ಯತ್ಯಾಸದ ಅಂತರ ಕಡಿಮೆಯಾಗುತ್ತ, ಅತ್ಯಂತ ಸೂಕ್ಷ್ಮ ಭಿನ್ನತೆ ಮಾತ್ರ ಉಳಿಯುವುದನ್ನು ಕಾಣುತ್ತೇವೆ. ಎಲ್ಲ ತಪ್ಪು ತಿಳುವಳಿಕೆ, ಅನರ್ಥಗಳಿಗೆ ಇದೇ ಕಾರಣವಾಯಿತು ಅನ್ನಿಸುತ್ತದೆ.

ಧಾರ್ಮಿಕವಾಗಿ, ಆಧ್ಯಾತ್ಮಿಕವಾಗಿ ಒಬ್ಬ ಸಾಧಕ ಮುಂದುವರಿಯಬೇಕಾದರೆ ತಾನು ನಂಬುವ ದೇವರಲ್ಲಿ, ತನ್ನ ಸಾಧನೆಯ ಮಾರ್ಗದಲ್ಲಿ (ಅದೇ 'ಧರ್ಮ'), ಹಾಗೂ ತನ್ನ ಪರಂಪರೆಯಲ್ಲಿ ಅಚಲ ನಿಷ್ಠೆಯಿರಬೇಕೆಂದು ಎಲ್ಲ ಧರ್ಮಗುರುಗಳು, ಎಲ್ಲ ಧರ್ಮಗ್ರಂಥಗಳು ಬೋಧಿಸುತ್ತವೆ. ಇದನ್ನು 'ಧರ್ಮಶ್ರದ್ಧೆ' ಎನ್ನಬಹುದು. ಇಷ್ಟನಿಷ್ಠೆ, ದೈವಭಕ್ತಿ, ಆಸ್ತಿಕತೆ ಎಂಬ ಮಾತಿನಿಂದಲೂ ಇದನ್ನು ಕರೆಯುತ್ತೇವೆ. ಇಲ್ಲಿ ಧಾರ್ಮಿಕ ಮುನ್ನಡೆಗೆ ಅಗತ್ಯವಾದ ಮಾನಸಿಕ ದೃಢತೆ, ನೈತಿಕ ಶಕ್ತಿ ಹಾಗೂ ಆಂತರಿಕ ಪ್ರೇರಣೆಯನ್ನು ಈ ಧರ್ಮಶ್ರದ್ಧೆ ನೀಡುತ್ತದೆ. ಇಲ್ಲಿ ಇದು ಸಂಪೂರ್ಣ ಸಕಾರಾತ್ಮಕ ಭಾವನೆಯಾಗಿದೆ. ಇಷ್ಟರಿಂದಲೇ ಯಾವುದೇ ಅನಾಹುತ, ಅನಾಚಾರ, ಗೊಂದಲ ಸೃಷ್ಟಿಯಾಗದು.

ಆದರೆ ತನ್ನ ಧರ್ಮ, ದೇವರುಗಳಲ್ಲಿ ನಿಷ್ಠೆ ಹಾಗೂ ಶ್ರದ್ಧೆ ಇದ್ದರೆ ಸಾಕೆ? ಅದೇ ನಿಷ್ಠೆ, ಶ್ರದ್ಧೆಗಳು ಅನ್ಯಮತ, ಅನ್ಯಧರ್ಮ, ಅನ್ಯದೇವತೆಗಳನ್ನು ದ್ವೇಷಿಸುವ ಪ್ರವೃತ್ತಿಯನ್ನುಂಟುಮಾಡದೆ? ಕೃಷ್ಣ ಅಥವಾ ಬುದ್ಧನನ್ನು ಏಕನಿಷ್ಠೆಯಿಂದ ಪೂಜಿಸುವ ಭಕ್ತನಿಗೆ

ಅನ್ಯಧರ್ಮದ ದೇವರನ್ನು ಅದೇ ನಿಷ್ಠೆಯಿಂದ ಪೂಜಿಸಲಾಗುವುದೆ? ಇದೇ ಧಾರ್ಮಿಕ ದ್ವೇಷ. ಎಲ್ಲ ಅನಾಹುತಗಳ ಮೂಲ ಇಲ್ಲೇ ಇದೆ ಎನ್ನುತ್ತದೆ ಒಂದು ವಾದ. ಈ ಕಾರಣದಿಂದ, ಧರ್ಮಗಳ ಮೂಲದಲ್ಲೇ ಅಸಹನೆ, ದ್ವೇಷ ಹಾಗೂ ಅಂಧಶ್ರದ್ಧೆ ಅಡಗಿವೆ; ನಿಷ್ಠೆ ಅಥವಾ ಶ್ರದ್ಧೆ ಎನ್ನುವುದು ಈ ದುಷ್ಟ ಭಾವನೆಗಳ ಇನ್ನೊಂದು ಹೆಸರಷ್ಟೇ ಎಂದು ಆ ವಾದ ಪ್ರತಿಪಾದಿಸುತ್ತದೆ.

ಈ ವಾದಕ್ಕೆ ಪ್ರತಿಯಾಗಿ ಹೇಳುತ್ತಾರೆ: ಶ್ರದ್ಧೆ ಅಥವಾ ಏಕನಿಷ್ಠೆ ದ್ವೇಷವನ್ನು ಪ್ರಚೋದಿಸುತ್ತದೆ ಎಂಬ ಮಾತೇ ಸುಳ್ಳು; ಅವೆರಡೂ ಬೇರೆ ಬೇರೆ ಪ್ರೇರಕ ಶಕ್ತಿಗಳು. ಶ್ರದ್ಧೆಯುಳ್ಳವನು ಅನ್ಯಧರ್ಮ, ಅನ್ಯದೇವತೆಯನ್ನು ದ್ವೇಷಿಸಬೇಕೆಂದೇ ಇಲ್ಲವಲ್ಲ? 'ಎಲ್ಲ ಧರ್ಮಗಳನ್ನೂ ಗೌರವಿಸು, ಆದರೆ ನಿನ್ನ ಧರ್ಮದಲ್ಲಿ ನಿಷ್ಠೆಯನ್ನು ಹೊಂದು' ಎಂಬ ಶ್ರೀರಾಮಕೃಷ್ಣರ ಮಾತಾಗಲಿ, 'ಇತರ ಎಲ್ಲ ಮಾರ್ಗಗಳನ್ನೂ ತ್ಯಜಿಸಿ, ನನ್ನಲ್ಲೇ ಶರಣಾಗತನಾಗು' ಎಂಬ ಗೀತೆಯ ಮಾತಾಗಲಿ ಈ ಭಾವನೆಯನ್ನೇ ಹೇಳುತ್ತವೆ. 'ಸರ್ವಧರ್ಮಾನ್ ಪರಿತ್ಯಜ್ಯ' ಎಂದರೆ ತನ್ನ ಆಯ್ಕೆಯ ಪಥವನ್ನು, ಭಾವನೆಯನ್ನು ತಾನು ಕಂಡುಕೊಳ್ಳುವಲ್ಲಿ ಅದು ನೆರವಾಗಬೇಕು ಎಂದರ್ಥವೇ ಹೊರತು, ಇತರ ಧರ್ಮಗಳನ್ನು ದ್ವೇಷಿಸಬೇಕು ಎಂದಲ್ಲ. ಈ ವಿಷಯದಲ್ಲಿ ಗೊಂದಲವುಂಟಾದಾಗಲೇ ಎಲ್ಲ ದ್ವೇಷ, ಹಿಂಸೆ, ಅನಾಚಾರಗಳು ಹುಟ್ಟುವುವು. ಇವೆರಡರ ನಡುವಿನ ವ್ಯತ್ಯಾಸ ಅತ್ಯಂತ ಸೂಕ್ಷ್ಮವಾದದ್ದು; ಅದರಿಂದಲೇ ಹಲವರು ಅದನ್ನು ತಪ್ಪು ತಿಳಿದುಕೊಳ್ಳುತ್ತಾರೆ. ಹಲವು ಮಂದಿ ಬುದ್ಧಿವಂತರು ಇಂತಹ ಗೊಂದಲಗಳನ್ನು ತಮ್ಮ ರಾಜಕೀಯ, ಸಾಮಾಜಿಕ ಹಿತಾಸಕ್ತಿಗಳಿಗಾಗಿ ಉಪಯೋಗಿಸಿಕೊಳ್ಳುತ್ತಾರೆ. ಅನೇಕ ಸಲ ಅದು ಹಲವು ಅನಾಚಾರಗಳಿಗೆ ಕಾರಣವಾಗುತ್ತದೆ. ಇದು ಎರಡನೆಯ ವಾದ.

ದ್ವೇಷದ, ತಿರಸ್ಕರಿಸುವ ಭಾವನೆ ಉಂಟಾಗದಂತೆ ಧರ್ಮಶ್ರದ್ಧೆ, ನಿಷ್ಠೆ , ಆಧ್ಯಾತ್ಮಿಕ ವಿಕಾಸ ಸಾಧ್ಯವಿಲ್ಲವೆ? ಖಂಡಿತ ಸಾಧ್ಯವಿದೆ. ಅಷ್ಟೇ ಅಲ್ಲ, ದ್ವೇಷಭಾವನೆಯನ್ನು ತ್ಯಜಿಸಿದಲ್ಲದೆ ನಿಜವಾದ ಶ್ರದ್ಧೆಯುಂಟಾಗದು, ಆಧ್ಯಾತ್ಮಿಕ ವಿಕಾಸ ಸಾಧ್ಯವಾಗದು ಎಂದೇ ಎಲ್ಲ ಧರ್ಮಗಳ ಮೂಲಪುರುಷರು, ಸಂತರು ಹಾಗೂ ಮೂಲಗ್ರಂಥಗಳು ಸಾರುತ್ತವೆ. ಎಲ್ಲ ಸಮಸ್ಯೆಗಳ ಮೂಲ ಇನ್ನೆಲ್ಲೋ ಅಡಗಿದೆ – ಮುಖ್ಯವಾಗಿ ಧರ್ಮಕ್ಕೆ ಹೊರತಾದ ಹಿತಾಸಕ್ತಿಗಳಿಂದ.

### ೩. ಧರ್ಮದ ವಿವಿಧ ಹಂತಗಳು

ಧರ್ಮಗಳು ಕೇವಲ ಕೆಲವು ವ್ಯಕ್ತಿಗಳ, ಕೆಲವು ಕುಟುಂಬಗಳ ಪದ್ಧತಿ ಅಥವಾ ಸಂಪ್ರದಾಯವಾಗಿ ಉಳಿದಿದ್ದರೆ ಸಮಾಜದಲ್ಲಿ ಇಷ್ಟೊಂದು ಗೊಂದಲವಿರುತ್ತಿರಲಿಲ್ಲ. ತೀರ ಸೀಮಿತ ವಲಯದ ಕೆಲವು ಆಚರಣೆಗಳು ಸುರಕ್ಷಿತವಾಗಿ, ತಮ್ಮ ವಲಯದಲ್ಲಿ ಮಾತ್ರ ಉಳಿದಿರುತ್ತಿದ್ದವು. ಆದರೆ ಧರ್ಮವು ಇಡೀ ಸಮಾಜವನ್ನೇ ವಿವಿಧ ಹಂತಗಳಲ್ಲಿ, ವಿವಿಧ ಪಂಗಡಗಳಲ್ಲಿ ವ್ಯಾಪಿಸಿ ನಿಂತಿದೆ; ಅದು ಸಮಾಜದ ಅವಿಭಾಜ್ಯ ಅಂಗವಾಗಿದೆ. 'ಧರ್ಮನಿರಪೇಕ್ಷ', 'ಸ್ವತಂತ್ರ ಭಾವನೆ' (free thinking) ಹಾಗೂ 'ಧರ್ಮರಹಿತ ಸಮಾಜ' ಎಂಬ ವಿಚಾರಧಾರೆಗಳೆಲ್ಲ ಎಷ್ಟು ಪ್ರಯತ್ನಪಟ್ಟರೂ ಸಮಾಜದಿಂದ ಧರ್ಮವನ್ನು ನಿವಾರಿಸುವುದು ಸಾಧ್ಯವಿಲ್ಲವೆಂಬುದು ಇಂದು ಸಾಬೀತಾಗಿದೆ. ಸಮಾಜ ಹಾಗೂ ಸಂಸ್ಕೃತಿಗೆ ಧರ್ಮ ಇಷ್ಟೊಂದು ಮುಖ್ಯವಾದ ಒಂದು ಪ್ರೇರಕ ಸಂಗತಿಯಾಗಬೇಕಾದರೆ, ಅದರ ಹಿಂದಿನ ಶಕ್ತಿಯೇನು ಎನ್ನುವುದನ್ನು ಮನಗಾಣಬೇಕು. ರೋಗ ನಿವಾರಣೆಗಾಗಿ ಕೈಯನ್ನೇ ಕತ್ತರಿಸುವ ಬದಲು, ರೋಗಕ್ಕೆ ಕಾರಣವಾದ ಅಂಶವನ್ನು ನಿವಾರಿಸುವುದೇ ಸೂಕ್ತ. ಅಂತೆಯೇ, ಧರ್ಮಕ್ಕೆ ಹತ್ತಿರುವ ರೋಗದ ಮೂಲ ಎಲ್ಲಿದೆ ಎಂದು ಕಂಡುಕೊಳ್ಳಲು, ಧರ್ಮದ ವಿವಿಧ ಹಂತಗಳ ಅಧ್ಯಯನ ನಡೆಸಬೇಕು.

**ಆಧ್ಯಾತ್ಮಿಕ ಹಂತ:** ಎಲ್ಲ ಧರ್ಮಗಳ ತಿರುಳು ಆಧ್ಯಾತ್ಮಿಕತೆ. ಅಲೌಕಿಕ ಅನುಭವ, ಸಾಕ್ಷಾತ್ಕಾರ ಹಾಗೂ ದಿವ್ಯ ಸತ್ಯಗಳ ಈ ಹಂತದಲ್ಲಿ ಪ್ರಾಪಂಚಿಕ ದ್ವಂದ್ವ, ಗೊಂದಲಗಳ ಮಾತೇ ಇರುವುದಿಲ್ಲ. ಈ ಹಂತ ಧರ್ಮದ ಆವಶ್ಯಕತೆಗೂ, ಅದರ ನೈಜ ಅಸ್ತಿತ್ವಕ್ಕೂ ಆಧಾರವಾಗಿದೆ. ಪ್ರತಿಯೊಂದು ಧರ್ಮಗಳೂ ಅಂತಿಮವಾಗಿ ಈ ಬಗೆಯ ಅನುಭವಗಳನ್ನೇ ಪ್ರತಿಪಾದಿಸುತ್ತವೆ. ಪ್ರಪಂಚ, ಮಾನವಜೀವನ, ಹಾಗೂ ಎಲ್ಲ ಅಪರಿಪೂರ್ಣತೆಗಳನ್ನು ಮೀರಿರುವ ಈ ಹಂತ ಕೇವಲ ಉನ್ನತ ಧ್ಯೇಯ, ಆದರ್ಶ ಹಾಗೂ ಅತ್ಯುಚ್ಚ ಗುಣಗಳನ್ನು ಪ್ರೇರೇಪಿಸುತ್ತದೆ. ಇಲ್ಲಿ ಮತಾಂಧತೆ, ಮತೀಯ ದ್ವೇಷಗಳಿಗೆ ಯಾವ ಸ್ಥಾನವೂ ಇಲ್ಲ; ಧರ್ಮಗಳ ಶುದ್ಧವಾದ, ಕಲುಷಿತಗೊಳ್ಳದ ಹಂತವಿದು.

**ತಾತ್ತ್ವಿಕ ಹಂತ:** ಅನುಭವವೇ ನೆಲೆಯಾಗಿರುವ ಆಧ್ಯಾತ್ಮಿಕ ಹಂತದ ಧರ್ಮವು ಸಾಧಕನ ಅಪರಿಣತ ಮನಸ್ಸನ್ನು ತಲುಪುವುದು ಗುರುವಿನ ಉಪದೇಶ ಹಾಗೂ ತರಬೇತಿಯ ಮೂಲಕ. ಆ ತರಬೇತಿಯಲ್ಲಿ ಸಾಧಕನ ಮನಸ್ಸು , ಬುದ್ಧಿಗಳನ್ನು ವಿಕಸನಗೊಳಿಸುವುದಕ್ಕೆ ಅಗತ್ಯವಾದ ಅಂಶವೇ ತಾತ್ತ್ವಿಕ ನಿರೂಪಣೆ. ಆಧ್ಯಾತ್ಮಿಕ ಅನುಭವಗಳನ್ನೇ ಆಧರಿಸಿ ನಿರೂಪಿಸುವ ತತ್ತ್ವಗಳನ್ನು ವಿವರಿಸುವಾಗ ಪ್ರತಿಯೊಬ್ಬ ಗುರು ಕೂಡ ತನ್ನದೇ ವಿಧಾನವನ್ನು ಅನುಸರಿಸುತ್ತಾನೆ. ಆದರೆ ಅದೇ ವಿಧಾನಗಳು ಮುಂದೆ ಒಂದೊಂದು ಪರಂಪರೆಯಾಗುತ್ತವೆ. ತಾತ್ತ್ವಿಕ ನೆಲೆಯನ್ನು ಹೊಂದುವಾಗ ಆಧ್ಯಾತ್ಮಿಕತೆಯು ವೈಯಕ್ತಿಕ ಹಂತವನ್ನೇ ಅವಲಂಬಿಸಬೇಕು ನಿಜ; ಆದರೂ ತತ್ತ್ವವು ಸಾರ್ವತ್ರಿಕತೆಯನ್ನೇ ಅವಲಂಬಿಸಿರುವುದರಿಂದಲೂ, ತತ್ತ್ವದ ಮೂಲ ನಿರೂಪಕರು ವೈಯಕ್ತಿಕ ಗುಣಲಕ್ಷಣಗಳನ್ನು ಮೀರಿದ ಸ್ವಭಾವವನ್ನು ಹೊಂದಿರುವುದರಿಂದಲೂ ಈ ಹಂತ ಇನ್ನೂ 'ವೈಯಕ್ತಿಕ ಹಂತ'ದ ಮಟ್ಟಕ್ಕೆ ಪೂರ್ಣವಾಗಿ ಇಳಿದಿರುವುದಿಲ್ಲ. ಆದರೆ ವಿವಿಧ ಪಂಥಗಳ, ಧರ್ಮಗಳ ವಿಶಿಷ್ಟ ಲಕ್ಷಣಗಳನ್ನು ಇವು ರೂಪಿಸುವುದರಿಂದ, ಈ ಹಂತವು 'ಆಧ್ಯಾತ್ಮಿಕ ಹಂತ'ಕ್ಕಿಂತ ಒಂದು ಮೆಟ್ಟಿಲು ಕೆಳಗಿನದು ಎನ್ನಬೇಕು.

**ವೈಯಕ್ತಿಕ ಹಂತ:** ಧರ್ಮವು ತನ್ನ ಎಲ್ಲ ಹಂತಗಳಲ್ಲೂ ಆಚರಣೆಯ ಮೂಲಕವೇ ಅಸ್ತಿತ್ವದಲ್ಲಿದೆ ಎನ್ನಬೇಕು. ಈ ಅರ್ಥದಲ್ಲಿ ವೈಯಕ್ತಿಕ ಹಂತ ಮುಖ್ಯವಾಗುತ್ತದೆ. ಮೊದಲ ಎರಡು ಹಂತ (ಆಧ್ಯಾತ್ಮಿಕ, ತಾತ್ತ್ವಿಕ)ಗಳಲ್ಲೂ ವೈಯಕ್ತಿಕತೆ ಎನ್ನುವುದು ಇದ್ದೇ ಇರುತ್ತದೆ; ಆದರೆ ಆ ಹಂತಗಳಲ್ಲಿ ವ್ಯಕ್ತಿ ತನ್ನ ಸೀಮಿತ ಅನುಭವ, ದೃಷ್ಟಿಕೋನ ಹಾಗೂ ಅರಿವಿನ ಪರಧಿಯನ್ನು ಮೀರಿ ಹೋಗುವುದರಿಂದಲೇ ಅಸಾಧಾರಣ ಸತ್ಯ ಗೋಚರವಾಗುವುದರಿಂದ, ವೈಯಕ್ತಿಕತೆಗಿಂತ ಸಾರ್ವತ್ರಿಕತೆಗೇ ಪ್ರಾಮುಖ್ಯತೆಯಿದೆ. ಆದರೆ ವ್ಯಕ್ತಿ ತನ್ನ ಸಾಮಾನ್ಯ ನೆಲೆಯಿಂದ ಆರಂಭಿಸಿ, ಧರ್ಮದ ಪಥದಲ್ಲಿ ಮುಂದುವರಿಯುವಾಗ ಅವನು ಹಲವು ಮೂಲಗಳಿಂದ ಮಾಹಿತಿ, ಪ್ರೇರಣೆ, ಮಾರ್ಗದರ್ಶನ ಪಡೆಯುತ್ತಲೂ, ತನ್ನ ಮಾನಸಿಕ–ಬೌದ್ಧಿಕ ವಿಕಸನದೊಂದಿಗೆ ಹೋರಾಡುತ್ತಲೂ ಬೆಳೆಯುತ್ತಾನೆ. ಶ್ರದ್ಧೆಯ ಅಥವಾ ನಿಷ್ಠೆಯ ವಿಚಾರ ಬಂದಾಗ ಈ ಹಂತ ಅತ್ಯಂತ ಮುಖ್ಯವಾದುದು. ಧರ್ಮವನ್ನು ಸರಿಯಾದ ಕ್ರಮದಲ್ಲಿ ಗ್ರಹಿಸುವ, ಅದನ್ನು ತನ್ನ ವೈಯಕ್ತಿಕ ಮತ್ತು ಸಾಮಾಜಿಕ ಬದುಕಿನೊಂದಿಗೆ ಆರೋಗ್ಯಕರ ರೀತಿಯಲ್ಲಿ ಅನುಷ್ಠಾನಗೊಳಿಸುವ ಬಗೆ ಸಂಪೂರ್ಣವಾಗಿ ಒಬ್ಬ ವ್ಯಕ್ತಿಯ ಸ್ವಭಾವವನ್ನು ಅವಲಂಬಿಸಿದೆ. ಮತಾಂಧತೆಗೂ ಶ್ರದ್ಧೆಗೂ ನಡುವೆ ಇರುವ ಅತ್ಯಂತ ತೆಳುವಾದ ಭಿನ್ನತೆಯನ್ನು ಗ್ರಹಿಸಲಾಗದಿದ್ದರೆ, ಮತಾಂಧತೆಯನ್ನೇ ಶ್ರದ್ಧೆಯೆಂದು ತಿಳಿದುಕೊಳ್ಳುವ ಅಪಾಯವಿದೆ. ಇದು ಒಂದು ಬಗೆಯ ಅಜ್ಞಾನವೇ; ಎಲ್ಲಿ ಇದು ಭಾವುಕತೆ, ಅಭಿಮಾನ ಹಾಗೂ ಗುಂಪುಗಾರಿಕೆಯ ಜಾಲದಲ್ಲಿ ಸಿಲುಕಿಕೊಳ್ಳುವುದೋ, ಆಗ ಅದು ಸಾಂಕ್ರಾಮಿಕ ರೋಗದ ಸ್ವರೂಪವನ್ನು ಪಡೆದುಕೊಳ್ಳುತ್ತದೆ; ವಿವಿಧ ಬಗೆಯ ಧರ್ಮವಿರೋಧಿ ('ಧರ್ಮ'–ನಿಜವಾದ ಅರ್ಥದಲ್ಲಿ) ವಾದಗಳು ಹುಟ್ಟಿಕೊಳ್ಳುತ್ತವೆ. ಸಮಾಜದಲ್ಲಿ ಎಲ್ಲ ಬಗೆಯ ಭಯಂಕರ ದುರಂತಗಳು ಸಂಭವಿಸುತ್ತವೆ.

**ಕೌಟುಂಬಿಕ ಹಂತ:** ವ್ಯಕ್ತಿಗೂ ಸಮಾಜಕ್ಕೂ ನಿಕಟ ಬಾಂಧವ್ಯವನ್ನು ಬೆಸೆಯುವ ಒಂದು ಅಂಶವೇ ಕುಟುಂಬ. ಧಾರ್ಮಿಕ ಕ್ಷೇತ್ರದಲ್ಲಿ ಇದು ಒಂದು ಪರಂಪರೆಯನ್ನು ಮುಂದುವರೆಸುವಲ್ಲಿ ಹಾಗೂ ಒಂದು ಮಾರ್ಗವನ್ನು ತಲೆಮಾರಿನಿಂದ ತಲೆಮಾರಿಗೆ ದಾಟಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಆದರೆ ಕುಟುಂಬಗಳು ಆಧ್ಯಾತ್ಮಿಕ, ತಾತ್ತ್ವಿಕ ಹಂತದ ಧರ್ಮವನ್ನು ಸಂರಕ್ಷಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸುವಂತೆಯೇ, ಕಲುಷಿತ ಸಾಮಾಜಿಕ ಪರಿಸರದಲ್ಲಿ ಮತಾಂಧ ದೃಷ್ಟಿಯನ್ನು ಹಬ್ಬಿಸುವಲ್ಲೂ ಕ್ರಿಯಾಶೀಲವಾಗುತ್ತದೆ. ಭಾರತದಂತಹ ದೇಶ, ಸಂಸ್ಕೃತಿಗಳಲ್ಲಿ ಕೌಟುಂಬಿಕ ಪರಿಸರವು ವೈಯಕ್ತಿಕ ದೃಷ್ಟಿ ಹಾಗೂ ಹಿತಾಸಕ್ತಿಗಳನ್ನು ಮೀರಿ ಕೆಲಸ ಮಾಡುತ್ತದೆ. ಆದರೆ ಕುಟುಂಬಗಳು ಜಾತಿಗೆ ಸಂಬಂಧಿಸಿದ ಪದ್ಧತಿ, ಪರಂಪರೆಗಳಿಗೆ ಬದ್ಧವಾಗಿರುವುದರಿಂದ, ಅವುಗಳ ಪ್ರತ್ಯೇಕ ಅಸ್ತಿತ್ವ ಎದ್ದು ಕಾಣಿಸುವುದಿಲ್ಲ; ಜಾತಿಗಳೇ ಪ್ರಧಾನ ಪಾತ್ರ ವಹಿಸುತ್ತವೆ.

**ಸಾಮಾಜಿಕ ಹಂತ:** ಮಾನವ ಜೀವನದಲ್ಲಿ 'ಸಮಾಜ'ವೆನ್ನುವ ಪರಿಕಲ್ಪನೆಯೇ ಅತ್ಯಂತ ವಿಶಿಷ್ಟವಾದದು. ವ್ಯಕ್ತಿ–ವ್ಯಕ್ತಿಗಳ ಸಂಬಂಧವನ್ನೂ, ಕೌಟುಂಬಿಕ ಬಾಂಧವ್ಯವನ್ನೂ, ಅದೇರೀತಿ ಸಾಂಸ್ಕೃತಿಕ ಒಡನಾಟ ಹಾಗೂ ಕೊಡು–ಕೊಳ್ಳುವಿಕೆಯನ್ನೂ ಅವಲಂಬಿಸಿ ಬೆಳೆಯುವ ಸಮಾಜದ ಚಟುವಟಿಕೆಗಳು ಅತ್ಯಂತ ಸಂಕೀರ್ಣವಾದ, ವೈವಿಧ್ಯಮಯವಾದ ಹಾಗೂ ಪ್ರಭಾವಶಾಲಿಯಾದ ವಲಯಗಳನ್ನು ಸೃಷ್ಟಿಸುತ್ತವೆ. ಇಂಥ ವಲಯಗಳಲ್ಲಿ ಜಾತಿ, ಆರ್ಥಿಕ ಅಂತಸ್ತು, ಧಾರ್ಮಿಕ ಪಂಥಗಳು ಪ್ರಮುಖವಾದವುಗಳು. ಧರ್ಮದ ಮೂಲಸ್ವರೂಪ ಇಲ್ಲಿ ಸಾಮೂಹಿಕ, ಸಾಮಾಜಿಕ ಸ್ವರೂಪವನ್ನು ಪಡೆದುಕೊಳ್ಳುತ್ತದೆ. ಇದರ ಪರಿಣಾಮವಾಗಿ ಅನುಭವ ಮೂಲವಾದ ಆಧ್ಯಾತ್ಮಿಕತೆಗಿಂತ ಆಚರಣಾತ್ಮಕವಾದ ಸಂಕೇತ, ಕ್ರಿಯಾವಿಧಿ ಹಾಗೂ ಸಂಪ್ರದಾಯಗಳು ಪ್ರಧಾನವಾಗುತ್ತವೆ. ಇವುಗಳೊಂದಿಗೆ ಅನೇಕ ಮೂಢನಂಬಿಕೆ, ಅರ್ಥಹೀನ ವಿಧಿವಿಧಾನಗಳೂ ಸೇರಿಕೊಂಡು 'ಧರ್ಮ'ವನ್ನು ಮರೆಮಾಚುತ್ತವೆ. ಆದರೆ ವೈಯಕ್ತಿಕ ಸಾಧನೆ, ತಿಳುವಳಿಕೆಗಳ ಬಲದಿಂದ ಆಧ್ಯಾತ್ಮಿಕತೆಯ ಹಂತವೂ ಇದರ ಒಳಪ್ರವಾಹವಾಗಿ ಹರಿಯುತ್ತಿರುತ್ತದೆ. ಅಂತೆಯೇ, ಮತಾಂಧತೆ ವ್ಯಾಪಕಗೊಳ್ಳುವ ಪ್ರಮುಖ ಸಂದರ್ಭವೂ ಇದೇ ಆಗಿದೆ.

**ರಾಜಕೀಯ ಹಂತ:** ಪ್ರಪಂಚದ ಇತಿಹಾಸವನ್ನು ಗಮನಿಸಿದಾಗ, ಮಾನವಜೀವನದಲ್ಲಿ ಅತ್ಯಂತ ಪ್ರಬಲವಾದ ಚಲನೆಗಳನ್ನು ಉಂಟುಮಾಡುವ ರಾಜಕಾರಣದಲ್ಲಿ ಧರ್ಮ ಅತ್ಯಂತ ಪ್ರಧಾನ ಪಾತ್ರ ವಹಿಸಿದ ಸಂದರ್ಭಗಳು ಅನೇಕ. ಭಾರತದಲ್ಲಿ ವೈದಿಕ, ಬೌದ್ಧ, ಜೈನ, ಹಾಗೂ ಇಸ್ಲಾಂ ಧರ್ಮಗಳು ರಾಜಕೀಯ ಸ್ಥಿತಿಗಳನ್ನು ನಿಯಂತ್ರಿಸಿದ ಉದಾಹರಣೆಗಳಿವೆ. ಅಂತೆಯೇ ಪಶ್ಚಿಮದಲ್ಲಿ ಕ್ರೈಸ್ತ, ಯೆಹೂದಿ ಹಾಗೂ ಇಸ್ಲಾಂ ಧರ್ಮಗಳು ಹಲವು ದೇಶಗಳ ರಾಜಕೀಯ ಬದಲಾವಣೆಗಳಲ್ಲಿ ಕೆಲಸ ಮಾಡಿವೆ. ಧರ್ಮಪ್ರಚಾರಕ್ಕೂ, ಆಧ್ಯಾತ್ಮಿಕ ವಿಕಾಸಕ್ಕೂ ಅವು ನೆರವಾಗಿರುವಷ್ಟೇ ಧರ್ಮಯುದ್ಧ ಹಾಗೂ ರಾಜಕೀಯ ಕಲಹಗಳಿಗೂ ಕಾರಣವಾಗಿವೆ. ಇಲ್ಲಿ ಧರ್ಮದೊಂದಿಗೆ ಆರ್ಥಿಕ, ಸಾಂಸ್ಕೃತಿಕ, ರಾಜಕೀಯ ಸೆಳೆತಗಳೂ ಸೇರಿಕೊಂಡಿರುವುದು, ಧರ್ಮವು ತನ್ನ ನೈಜಸ್ವರೂಪ ಕಳೆದುಕೊಳ್ಳುವಂತೆ ಮಾಡುತ್ತದೆ. ಇಂದಿಗೂ ರಾಜಕೀಯ ಹಂತದಲ್ಲಿ ಧರ್ಮ ಪ್ರಭಾವ ಶಾಲಿಯಾಗಿರುವುದಕ್ಕೆ ಅದರ ಆಧ್ಯಾತ್ಮಿಕ ಸ್ವರೂಪಕ್ಕಿಂತ, ವಿವಿಧ ನೆಲೆಗಳಿಂದ ಉಂಟಾಗುವ ಸೆಳೆತಗಳೇ ಕಾರಣವಾಗಿರುವುದು ಎಲ್ಲ ದುರಂತಗಳ ಮೂಲ ಎನ್ನಬೇಕು.

### ೪. ವಿಜ್ಞಾನ – ಆಧ್ಯಾತ್ಮಿಕತೆ

ಈ ಎಲ್ಲ ಬದಲಾವಣೆಗಳ ನಡುವೆ ಧರ್ಮಶ್ರದ್ಧೆ, ಧಾರ್ಮಿಕ ನಿಷ್ಠೆ ಇವುಗಳನ್ನು ಅಸಾಧಾರಣ ರೀತಿಯಲ್ಲಿ ಪ್ರಭಾವಗೊಳಿಸಿದ ಒಂದು ಕ್ಷೇತ್ರವೇ ವಿಜ್ಞಾನ. ಅದು ಧರ್ಮಕ್ಕೆ ಹಾನಿ ಮಾಡಿರುವುದಕ್ಕಿಂತ, ಧರ್ಮದ ಹಾನಿಕಾರಕವಾದ, ಅರ್ಥಶೂನ್ಯವಾದ ಅಂಶ